ವಾರದ ಪತ್ರ

## ವೀಕ್ಷಕರಿಗೂ ಪ್ರೋತ್ಸಾಹ ಇರಲಿ

ಚಂದನ ವಾಹಿನಿಯಲ್ಲಿ ಪ್ರಸಾರವಾಗುವ 'ಥಟ್ ಅಂತ ಹೇಳಿ' ಆರಂಭದಿಂದ ಬಿಡದೆ ನಮ್ಮ ಮನೆಯವರೆಲ್ಲಾ ನೋಡುತ್ತಿದ್ದೇವೆ. ನಾವು ಎಷ್ಟೇ ಪತ್ರ ಬರೆದರೂ ಒಮ್ಮೆಯೂ ಆಯ್ಕೆಯಾಗಲಿಲ್ಲ. ಯಾವ ರೀತಿಯಲ್ಲಿ ಆರಿಸುತ್ತಾರೋ ಗೊತ್ತಿಲ್ಲ. ಅದು ಬಿಡಿ. ಅಲ್ಲಿ ಬರುವ ಸ್ಪರ್ಧಿಗಳು ಎಷ್ಟೋ ಮಂದಿ ಸುಲಭದ ಪ್ರಶ್ನೆಗಳಿಗೂ ಉತ್ತರಿಸುವುದಿಲ್ಲ. ಆದರೆ, ವೀಕ್ಷಕರಿಗೆ ಬೇಗ ಉತ್ತರ ತಿಳಿಯುತ್ತದೆ. ಅಲ್ಲಿ ಅವರ ಪ್ರಶ್ನೆಗೆ ಉತ್ತರವಾಗಿ ಕೊಡುವ ಪುಸ್ತಕಗಳು ನಮಗಾದರೂ ಸಿಗಬಾರದಿತ್ತೇ ಎಂದೆನಿಸುತ್ತದೆ. ಆದ್ದರಿಂದ ನನ್ನದೊಂದು ವಿನಂತಿ ಏನೆಂದರೆ ಸ್ಪರ್ಧಿಗಳಿಗಿಂತ ಮೊದಲೇ ಉತ್ತರ ಹೇಳುವ ವೀಕ್ಷಕರಿಗೆ ಆ ಪುಸ್ತಕಗಳನ್ನು ಬಹುಮಾನದ ರೀತಿ ಅಂಚೆಯಲ್ಲಿ ಕಳುಹಿಸಿಕೊಡುವ ವ್ಯವಸ್ಥೆ ಮಾಡಿದರೆ ಚಂದ. ವೀಕ್ಷಕರನ್ನು ಪ್ರೋತ್ಸಾಹಿಸಿದಂತಾಗುತ್ತದೆ. ಇದೊಂದು ಸೌಲಭ್ಯವನ್ನು ದೂರದರ್ಶನದವರು ಮಾಡಬೇಕಾಗಿ ಪ್ರಾರ್ಥನೆ.

—ವೈದೇಹಿ, ಮಂಡ್ಯ

## ಕಮಲಿ ಕಾಮಿಡಿ

ಕಮಲಿ ಧಾರಾವಾಹಿಯಲ್ಲಿ ಕಾಮಿಡಿ ಇರಲಿಲ್ಲ. ಒಂದಿಬ್ಬರು ಕಲಾವಿದರ ಸೇರ್ಪಡೆಯೊಂದಿಗೆ (20.1.19) ಕಾಮಿಡಿ ಶುರುವಾಗಿದೆ. ಸಸ್ಯಶಾಸ್ತ್ರ ಉಪನ್ಯಾಸಕರು ಡ್ರಾಮಾ ಮಾಸ್ಟರ್ ಆಗಿ ಮೂಗಿನಿಂದಲೇ ಮುಸಿ ಮುಸಿ ನಗಿಸುತ್ತಾರೆ. ಇನ್ನೊಬ್ಬರು ಕಾಮಿನಿ, ಊರ್ಮಿಯವರು ಮಂಗಳಮ್ಮನವರನ್ನು ಹುಡುಕಿಕೊಡಿ ಜಾಹೀರಾತಿಗೆ ಸ್ಪಂದಿಸಿದ ಕಲಾವಿದರಾಗಿರುತ್ತಾರೆ. ಡ್ರಾಮಾ ಜೂನಿಯರ್‌ನಲ್ಲಿ ಬಾಲನಟಿಯೊಬ್ಬಳ ಮುಖ ಚಹರೆ ನರಸಿಂಹರಾಜು ನೆನಪಿಗೆ ಬರುತ್ತಾರೆ.

—ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ

## ಮಕ್ಕಳ ಶೋಷಣೆ ನಿಲ್ಲಲಿ

ಟೀವಿ ಚಾನಲ್‌ಗಳು ಪುಟ್ಟ ಪುಟ್ಟ ಮಕ್ಕಳಿಗೆ ದೈಹಿಕವಾಗಿ ಅಲ್ಲದಿದ್ದರೂ ಮಾನಸಿಕವಾಗಿ ಶೋಷಣೆ ಮಾಡುತ್ತಿವೆ. ಮಕ್ಕಳಿಗೇ ಮೀಸಲಾದ ಅನೇಕ ಸಂಗೀತ, ಡ್ಯಾನ್ಸ್ ಕಾರ್ಯಕ್ರಮಗಳು ವಿವಿಧ ಚಾನಲ್‌ಗಳಲ್ಲಿ ಪ್ರಸಾರವಾಗುತ್ತಿದ್ದು ಷೋ ಗಳಲ್ಲೇ ಮಕ್ಕಳು ಬಿದ್ದು ಕೈಕಾಲು ಮುರಿದುಕೊಂಡು ಅನೇಕ ಅವಘಡಗಳೂ ಸಂಭವಿಸುತ್ತಿವೆ.

ಮಕ್ಕಳ ಪೋಷಕರಂತೂ ತಮ್ಮ ಮಕ್ಕಳು ಮೈಕೇಲ್ ಜಾಕ್ಸನ್, ಲತಾ ಮಂಗೇಷ್ಕರ್, ಸೋನುನಿಗಮ್ ಅವರಷ್ಟು ಪ್ರಸಿದ್ಧರಾಗಿ ಹಣದ ಹೊಳೆ ಹರಿಸಿ ಇಡೀ ದೇಶದಲ್ಲಿ ತಮಗೆ ಸರಿಸಾಟಿ ಯಾರೂ ಇಲ್ಲವೇನೋ ಎಂಬಂಥ ಹೆಗ್ಗಳಿಕೆಯನ್ನು ಮೆರೆಯುತ್ತಿದ್ದಾರೆ. ಹಾಗಾಗಿ ಮಕ್ಕಳ ಭವಿಷ್ಯ ಜೀವನವನ್ನು ಕಡೆಗಣಿಸಿ ರಿಯಾಲಿಟಿ ಷೋಗಳ ಹುಚ್ಚಿನಲ್ಲಿಯೇ ಕುಣಿಯುತ್ತಿದ್ದಾರೆ. ಟೀವಿ ಕಾರ್ಯಕ್ರಮಗಳಿಗೆ ಆಯ್ಕೆಯಾದ ಮಕ್ಕಳು ತಮ್ಮ ಪಾಠ ಪ್ರವಚನಗಳಿಗೆ ತಿಲಾಂಜಲಿಯಿತ್ತು ಷೋಗಳ ತರಬೇತಿ ಕೇಂದ್ರಗಳಲ್ಲಿ ತಿಂಗಳಾನುಟ್ಟಲೆ ನಿರತರಾಗಬೇಕಾಗುತ್ತದೆ. ದೊಡ್ಡವರು ಅವರವರ ಜವಾಬ್ದಾರಿಯನ್ನು ಅರಿತುಕೊಳ್ಳುತ್ತಾರೆ. ಪುಟ್ಟ ಮಕ್ಕಳಿಗೆ ಇದೊಂದು ಮಾನಸಿಕ ಒತ್ತಡವೇ ಸರಿ. ಎಲಿಮಿನೇಟ್ ಆದಾಗ ಆ ಮಕ್ಕಳ ಮಾತುಗಳು ಹೃದಯ ಕಲಕುತ್ತವೆ. ಅಲ್ಲಿಂದ ಸೋತು ಹಿಂದೆ ಬಂದ ನಂತರ ಮತ್ತೆ ಮುಂದಿನ ಶಾಲಾ ಜೀವನಕ್ಕೆ ಹೊಂದಿಕೊಳ್ಳಲು ಹೆಣಗಾಡಬೇಕಾಗುತ್ತದೆ. ಅಷ್ಟರ ಮಟ್ಟಿಗೆ ಷೋಗಳಿಗೆ ಅಡಿಕ್ಟ್ ಆಗಿ ಬಿಟ್ಟಿರುತ್ತಾರೆ. ಇದು ಶೋಷಣೆಯ ಮತ್ತೊಂದು ರೂಪವೇ ಅಲ್ಲವೇ?

—ಪುಷ್ಪಾ ಎನ್.ಕೆ. ರಾವ್ ಉಡುಪಿ

## ರಾಧಾ ಹೀಗೆ ಮಾಡಲಿ

ಕಲ್ಲರ್ಸ್‌ನ ರಾಧಾರಮಣ ಕುತೂಹಲ ಮೂಡಿಸುವ ಸೀರಿಯಲ್ ಆಗಿದ್ದು, ರಾಧಾ ಈಗಾಗಲೇ ಮೂರು ಭಾರಿ ಅವನಿ ಮತ್ತು ಮಾದ ಜೊತೆಯಾಗಿರುವುದನ್ನ ಹಾಗೂ ಇಬ್ಬರೂ ಲಲ್ಲೆ ಹೊಡೆಯುತ್ತಿರುವುದನ್ನ ಕಣ್ಣಾರೆ ನೋಡಿರುತ್ತಾರೆ. ಇದನ್ನ ರಮಣ ಹಾಗೂ ಮನೆಯವರ ಹತ್ತಿರ ಹೇಳಿದರೆ ಅವರ್‍ಯಾರೂ ನಂಬುತ್ತಿಲ್ಲ. ಹಾಗಿದ್ದಾಗ ಅವರು ಲಲ್ಲೆ ಹೊಡೆಯುತ್ತಿರುವುದನ್ನು ರಾಧಾ ಮೊಬೈಲ್‌ನಲ್ಲಿ ಫೋಟೊ ಅಥವಾ ವಿಡಿಯೋ ಮಾಡಿಕೊಂಡು ಅವರಿಗೆ ತೋರಿಸಿ ನಂಬುವ ಹಾಗೆ ಮಾಡಬಹುದಿತ್ತಲ್ಲ.

—ಸಾವಿತ್ರಮ್ಮ, ಎ.ಸಿ. ಚಂದ್ರಪ್ಪ, ಅಜ್ಜಂಪುರ, ಲಲಿತಾ.ಕೆ., ಪುತ್ತೂರು

## ಸಮಾಜದ ಪ್ರತಿಬಿಂಬ

ಕಲರ್ಸ್ ಸೂಪರ್‌ನ 'ಮಗಳು ಜಾನಕಿ'ಯಲ್ಲಿನ ಪಾತ್ರಗಳು ನಮ್ಮ ಸುತ್ತಲಿನ ಜನರನ್ನೇ ಪ್ರತಿನಿಧಿಸುತ್ತವೆ. ಎಲ್ಲಾ ವಿಷಯಗಳು ಗೊತ್ತಿದ್ದರೂ ಅದನ್ನು ಹೇಳಲಾಗದೆ ತನ್ನ ಮಗಳಿಗೆ ಆಸರೆಯಾಗಿ ನಿಲ್ಲುವ ಸಿಎಸ್ಪಿ. ತನ್ನದಲ್ಲದ ತಪ್ಪಿಗೆ ಮೋಸಗಾರನೆಂಬ ಪಟ್ಟವನ್ನು ಪಡೆದ ನಿರಂಜನ. ಎಲ್ಲರಿಂದಲೂ ಮೋಸ ಹೋಗಿ ಎಲ್ಲರ ಮೇಲೂ ನಂಬಿಕೆ ಕಳೆದುಕೊಂಡು ನಿಧಾನವಾಗಿ ತನ್ನ ಅಸ್ತಿತ್ವವನ್ನು ಪಡೆಯಲು ಹೆಣಗುತ್ತಿರುವ ಜಾನಕಿ. ಸ್ವಾರ್ಥಕ್ಕಾಗಿ ಯಾವುದೇ ಕೆಲಸ ಮಾಡಲು ಸಿದ್ಧವಿರುವ ಭಾರ್ಗಿ. ತನ್ನ ಮಗಳಾಗದ ಅನ್ಯಾಯವನ್ನು ನೋಡಿ ಏನು ಮಾಡಲಾಗದ ಅಸಹಾಯಕ ತಾಯಿ ರಶ್ಮಿ. ಅನಾರೋಗ್ಯದ ನಡುವೆ ಹೋರಾಟ ನಡೆಸುತ್ತಿರುವ ದೇವಕಿರಾಜು. ಸ್ವಂತ ತಂದೆತಾಯಿಗೆ ವಂಚನೆ ಮಾಡುವ ಸುಹಾಸ್ ದೇವಘಟ್ಟ. ಎಲ್ಲಾ ಪಾತ್ರಗಳು ಸಮಾಜದ ಪ್ರತಿನಿಧಿಗಳಂತೆ ಕಾಣಿಸುತ್ತಾರೆ.

—ವಿಜಯಲಕ್ಷ್ಮಿ ಬೆಂಗಳೂರು, ಸೀತಾ ಕೇಶವ ಸಿಡ್ನಿ

**ಅಪ್ಪ– ಮಗಳು:** ಸೀತಾರಾಂ, ಜಾನಕಿ ನಟಿಸಿರುವ ರೀತಿ ನಿಜವಾಗಿಯೂ ಅಪ್ಪ, ಮಗಳು ಅನ್ನುವಷ್ಟು, ಮತ್ತೆ ತಂದೆ ತೋರಿಸುತ್ತಿರುವ ಕಾಳಜಿ, ಇವೆಲ್ಲಾ ಕಣ್ಣಲ್ಲಿ ನೀರು ತರಿಸುತ್ತೆ.

—ಸಿ.ಎಸ್. ವಿಜಯಲಕ್ಷ್ಮಿ, ಶಿವಮೊಗ್ಗ

**ನಿರಾಶೆಯ ಕತೆ:** ಜಾನಕಿ ನೋಡುವವರಿಗೆ ಖಂಡಿತಕ್ಕೂ ನಿರಾಸೆಯಾಗುತ್ತದೆ. 'ಮನ್ವಂತರ, ಮುಕ್ತ' ಅಂತಹ ಧಾರಾವಾಹಿ ಕೊಟ್ಟ ಸೀತಾರಾಂ ಅವರು ಇಲ್ಲಿ ಸೋತಿದ್ದಾರೆ. ಚಂದು ಭಾರ್ಗಿಯ ಪಾತ್ರ ಬಿಟ್ಟರೆ, ಉಳಿದ ಪಾತ್ರಗಳಲ್ಲಿ ಗಟ್ಟಿತನವಿಲ್ಲ. ಮಗಳು ಮಾತ್ರ ಮೋಸ ಮಾಡಿದವನನ್ನು ಡಿವೋರ್ಸ್ ಮಾಡಿದರೆ ಜಾನಕಿಯ ಬದುಕು ಚೂರು ಚೂರಾಗುತ್ತದೆ ಎಂದು ಹೇಳುವುದು ನೋಡಿದರೆ ನಗು ಬರುತ್ತದೆ. ನಿರಂಜನನ ತಾಯಿ, ಅಕ್ಕನದೂ ಅಷ್ಟೇ ವಿಚಿತ್ರ. ಮಗನ ಹೆಂಡತಿಯನ್ನು ಕುತೂಹಲಕ್ಕಾದರೂ ಫೋಟೊಗಳನ್ನು ನೋಡುವುದಿಲ್ಲವೆ?

—ಪ್ರತಿಭಾ ಹೆಗಡೆ, ಯಲ್ಲಾಪುರ (ಉ.ಕ.)

## ವೀಲ್ ಚೇರ್‌ನಲ್ಲಿ ಭರತನಾಟ್ಯ

ಝೀ ವಾಹಿನಿಯಲ್ಲಿ ಪ್ರಸಾರವಾಗುವ 'ಡ್ರಾಮಾ ಜೂನಿಯರ್ಸ್'ನಲ್ಲಿ ಸಾಧನೆ ಮಾಡಿದ ಸಾಧಕರನ್ನು ಪರಿಚಯಿಸುವ ಮಾಲಿಕೆಯಲ್ಲಿ ಸೈಯದ್ ಸಲಾವುದ್ದೀನ್ ಪಾಷ ಅವರನ್ನು ಪರಿಚಯಿಸಿ ಇಷ್ಟವಾಯಿತು. ಅಂಗವಿಕಲರಿಗೆ ವೀಲ್‌ಚೇರಿನಲ್ಲಿಯೇ ಕ್ಲಿಷ್ಟವೆನಿಸುವ ಭರತನಾಟ್ಯ ಕಲಿಸುವುದು ಸವಾಲಿನ ಸಂಗತಿಯೇ. ಭರತನಾಟ್ಯ ಪ್ರದರ್ಶಿಸಿದ ರೀತಿ ಸೋಜಿಗವೆನಿಸಿತು. ಆ ವಿದ್ಯಾರ್ಥಿಗಳ ಆಸಕ್ತಿಯೂ ಸಹ ಪ್ರಶಂಸನೀಯ. ಇಂತಹ ವಿಭಿನ್ನ ವಿಶಿಷ್ಟ ಕಾರ್ಯಕ್ರಮಗಳನ್ನು ನೀಡುತ್ತಿರುವ ಝೀ ವಾಹಿನಿಯ ಕಾರ್ಯ ಸ್ತುತ್ಯಾರ್ಹ.

—ವಿಭಾ ಮುರಳೀಧರ್, ತುಮಕೂರು

**ಯಶೋಗಾಥೆ:** ಡ್ರಾಮಾದ ಖ್ಯಾತ ಛಾಯಾಗ್ರಾಹಕರಾದ ಕೃಪಾಕರ ಹಾಗೂ ಸೇನಾನಿ ಯವರ ಸಾರ್ಥಕ ಬದುಕಿನ ಯಶೋಗಾಥೆಯನ್ನು ಪರಿಚಯಿಸಿದ ಝೀ ವಾಹಿನಿಗೆ ಧನ್ಯವಾದಗಳು ಮಕ್ಕಳಿಗೆ ಇವರ ಜೀವನ ದಾರಿ ದೀಪವಾಗಬಲ್ಲದು.

—ಪ. ಚಂದ್ರಕುಮಾರ ಗೌನಹಳ್ಳಿ